## ಮಾತಿಗೆ ಬೀಗ ಮುದ್ರೆ

ಅತೀ ಮಾತುಗಾರರ ಬಾಯಿಗೆ ಬೀಗ ಹಾಕಿದ್ರೆ ಒಳ್ಳೆಯದು ಅಂದ್ಕೊಳ್ತೀವಿ. ಹಾಗೆ ಮಾಡಲು ಸಾಧ್ಯವಾಗದು. ರತ್ನನ ಪದದಂತೆ ನಾಲಗೆ ಸೀಳಿದ್ರೂ ಮೂಗಲ್ಲಿ ಕನ್ನಡ ಪದಗಳನ್ನಾಡುವ ಮಂದಿ ಇದ್ದಾರೆ. ಸೈಲೆನ್ಸ್‌ಪ್ಲೀಸ್ ಫಲಕವನ್ನು ಸಾಂಕೇತಿಕವಾಗಿ ತೋರಿಸುವುದಕ್ಕೆ ಧಾರವಾಡದ ಚಿತ್ರಕಲಾ ಕಾಲೇಜು ಆವರಣದಲ್ಲಿ ತುಟಿ ತೆರೆದ ಬೀಗದ ಶಿಲ್ಪಕಲಾಕೃತಿ ಇರಿಸಲಾಗಿದೆ.

ಕ್ಯಾಂಪಸ್ ಪ್ರವೇಶವಾಗುತ್ತಿದ್ದಂತೆ ಕಣ್ಣಿಗೆ ಬೀಳುವ ಸೃಜನಾತ್ಮಕ ಕೃತಿಯ ಪ್ರದರ್ಶನದಿಂದ 'ಮಾತು ಕಡಿಮೆ ಕೆಲಸ ಹೆಚ್ಚು' ಎಂಬ ಸಂದೇಶ ರವಾನೆಯಾಗುತ್ತದೆ. ಇದನ್ನು ಅದೇ ವಿದ್ಯಾಲಯದ ವಿದ್ಯಾರ್ಥಿಗಳು ಕಬ್ಬಿಣದ ಸರಳು ಮತ್ತು ಸಿಮೆಂಟ್‌ನಿಂದ ರಚಿಸಿದ್ದಾರೆ.

—ಜೀವನ್ ಶೆಟ್ಟಿ, ಉಡುಪಿ





## ದುಡಿಮೆಯೇ ದೇವರು

ಮನೆ ಮುಂದೆ 'ಕತ್ತಿ, ಚಾಕು ಸಾಣೆ ಹಿಡಿಸೋದಿದೆಯಾ ಎಂಬ ಕೂಗು ಭಾನುವಾರದ ಬೆಳಿಗ್ಗೆ ಕೇಳಿ ಬಂತು. ಅಲೆಮಾರಿ ಕಾರ್ಮಿಕನೊಬ್ಬ ಸಾಣೆ ಹಿಡಿಯುವ ಯಂತ್ರದೊಂದಿಗೆ ಹಾಜರಾಗಿದ್ದ. ಮನೆಯಲ್ಲಿದ್ದ ಕತ್ತಿ, ಮೆಟ್ಟುಗತ್ತಿ, ಚಾಕು ಯಂತ್ರವನ್ನೆಲ್ಲಾ ಸಾಣೆ ಹಿಡಿಸಿದೆ. ಎಷ್ಟು ಎಂದು ಕೇಳಿದಾಗ ಒಟ್ಟು 150 ರೂಪಾಯಿ ಎಂದ. ಮಧ್ಯಮವರ್ಗದ ನಮ್ಮಂತಹವರ ಚೌಕಾಸಿ ಮಂತ್ರದೊಂದಿಗೆ 100 ರೂಪಾಯಿ ಮಾಡಿಕೋ ಎಂದು ಕೇಳಿದೆ. ತನ್ನೂರು ಧಾರವಾಡವೆಂತಲೂ, ಅಲ್ಲಲ್ಲಿ ಕ್ಯಾಂಪ್ ಮಾಡಿ 15 ದಿನವಿದ್ದು ಬೇರೆ ಊರಿಗೆ ತೆರಳುತ್ತೇವೆ ಎಂದ. ಸರ್ಕಾರದ ಯಾವುದೇ ಸೌಲಭ್ಯಗಳ ಭಾಗ್ಯ ನಮಗಿಲ್ಲ, ತಿರುಗಾಟ, ದುಡಿಮೆ ಎರಡೇ ನಮಗಿರುವ ದಾರಿ ಎಂದವನಿಗೆ ನಿರಾಕರಿಸಿದರೂ 150 ರೂಪಯಿ ಕೊಟ್ಟು ಕಳುಹಿಸಿದೆ.

ಅವನು ತನ್ನ ಸಾಣೆ ಯಂತ್ರವೇ ತನ್ನ ಜೀವನದ ಭಾಗವಾಗಿರುವುದರಿಂದ ಮುಂಭಾಗದಲ್ಲಿ 'ನಾನು ಒಬ್ಬ ವ್ಯಾಪಾರಸ್ಥ, ವ್ಯಾಪಾರ ನನ್ನ ಧರ್ಮ, ಗ್ರಾಹಕರೇ ನನ್ನ ದೇವರು, ಸಾಣೆ ನನ್ನ ಕಸುಬು, ಪರಿಶ್ರಮ ನನ್ನ ಪೂಜೆ' ಎಂಬ ವಾಕ್ಯವನ್ನು ಬರೆಸಿದ್ದೇನೆ ಎಂದು ವಿವರಣೆ ನೀಡಿದ.

—ಕೆ. ರಾಮಕೃಷ್ಣ, ತೀರ್ಥಹಳ್ಳಿ

## ಪಾರದರ್ಶಕ ಮೀನು



ಜೆಲ್ಲಿ ಮೀನು ಪಾರದರ್ಶಕವಾಗಿರುತ್ತವೆ. ಅವುಗಳಿಗೆ ಹೃದಯ. ಶ್ವಾಸಕೋಶ ಅಥವಾ ಮೆದುಳು ಇರುವುದಿಲ್ಲ. ಅದರ ಚರ್ಮ ತುಂಬಾ ತೆಳ್ಳಗಿರುವುದರಿಂದ ಅದರ ಮೂಲಕ ಆಮ್ಲಜನಕವನ್ನು ಹೀರಿಕೊಳ್ಳುತ್ತವೆ. ಆದ್ದರಿಂದ ಅವುಗಳಿಗೆ ಶ್ವಾಸಕೋಶದ ಅಗತ್ಯವಿಲ್ಲ. ರಕ್ತವಿಲ್ಲದ ಕಾರಣ ಅಗತ್ಯವೂ ಇಲ್ಲ. ಚರ್ಮದ ಹೊರಪದರದ ಎಪಿಡರ್ಮಿಸ್‌ನ ಕೆಳಗಿರುವ ನರ ನಿವ್ವಳದಿಂದ ಸಿಗ್ನಲ್‌ಗಳನ್ನು ಬಳಸಿಕೊಂಡು ಪ್ರತಿಕ್ರಿಯಿಸುತ್ತವೆ.

—ಎಸ್. ಪ್ರಭಾವತಿ, ಬೆಂಗಳೂರು